ಮಹಿಳಾದಿನ ವಿಶೇಷ



ಪರಿಸರಸ್ನೇಹಿ 'ಬಣ್ಣದ ವೇಷ'

# 'ಕರ–ಚಿತ್ರ'ದಲ್ಲಿ ಕರಾವಳಿ ಬದುಕು

**ತುಳುನಾಡಿನ ಸಂಸ್ಕೃತಿಯನ್ನು ಕಲೆಯ ಮೂಲಕ ಪ್ರಚುರಪಡಿಸುವ ಜೊತೆಗೆ ಪರಿಸರಸ್ನೇಹಿ ಪರಿಕಲ್ಪನೆಯನ್ನೂ ಸಾಕಾರಗೊಳಿಸುತ್ತಿದ್ದಾರೆ ನಯನಾ.**

■ **ಜೀವನ್ ಶೆಟ್ಟಿ**

ಉಡುಪಿ ಮೂಲದ ನಯನಾ ಆಚಾರ್ಯ ಅವರಿಗೆ ಕಲೆ ಮನದ ಅಭಿವ್ಯಕ್ತಿಯೂ ಹೌದು, ತನ್ನ ನೆಲದ ಸಂಸ್ಕೃತಿಯನ್ನು ಬಿಂಬಿಸಲು ಇರುವ ಕನ್ನಡಿಯೂ ಹೌದು. ಇದಕ್ಕೆ ನಿದರ್ಶನದಂತಿದೆ ಅವರ ಈ 'ಕರ–ಚಿತ್ರ' ಕಲಾಕೃತಿಗಳು.

ಚಿತ್ರಕಲೆ ಬಗ್ಗೆ, ಬಣ್ಣಗಳ ಬಗ್ಗೆ ಅಪಾರ ಒಲವು ಹೊಂದಿದ್ದ ನಯನಾ, ಮೂಡಬಿದ್ರೆ ಆಳ್ವಾಸ್‌ನಲ್ಲಿ ಬ್ಯಾಚುಲರ್ ಆಫ್ ವಿಷುವಲ್ ಪೇಂಟಿಂಗ್ ಆರ್ಟ್ ಶಿಕ್ಷಣ ಪಡೆದವರು.

ಕಳೆದ ಆರು ವರ್ಷಗಳಿಂದ ವಿವಿಧ ಕಲಾ ಪ್ರಕಾರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಕ್ಯಾರಿಕೇಚರ್‌ನಲ್ಲಿಯೂ ಆಸಕ್ತಿ ತಳೆದಿದ್ದು, ಕಲೆಯಲ್ಲಿ ಹಲವು ಪ್ರಯೋಗಗಳನ್ನು ಮಾಡುತ್ತಾ ಬಂದಿದ್ದಾರೆ. ಈ ಪ್ರಯೋಗಕ್ಕೆ ಈಚಿನ ಸೇರ್ಪಡೆ, ಪರಿಸರಸ್ನೇಹಿ 'ಕರ–ಚಿತ್ರ' ಕಲಾಕೃತಿಗಳು.

ತುಳುನಾಡಿನ ಸಂಸ್ಕೃತಿಯೇ ಆಗಿರುವ, ತುಳುವರ ಮನೆ ಮನಸ್ಸಿನಲ್ಲಿ ಅಚ್ಚಾಗಿರುವ ಯಕ್ಷಗಾನವನ್ನು, ತೆಂಕು–ತೆಟ್ಟು ಯಕ್ಷಗಾನದ ಬಣ್ಣದ ವೇಷದ ಸೊಗಸನ್ನು, ತಮ್ಮ ಪರಿಸರವನ್ನು ಕಲೆಯ ಮೂಲಕ ಪ್ರಸ್ತುತಪಡಿಸಲು ಹೊರಟ ನಯನಾ ಅವರು, ಭಿನ್ನ ರೀತಿಯಲ್ಲಿ ಅದನ್ನು ಪ್ರಸ್ತುತ ಪಡಿಸಿದ್ದಾರೆ. ಪರಿಸರಸ್ನೇಹಿ ಪರಿಕಲ್ಪನೆಯಲ್ಲಿ ದೊಡ್ಡ ಕಲಾಕೃತಿಗಳನ್ನು ಒಡಮೂಡಿಸುತ್ತಿದ್ದಾರೆ.

ಬಣ್ಣದ ವೇಷದ ಅದ್ಭುತವನ್ನು ತೋರಲು ಅವರು ಬಳಸಿಕೊಂಡಿರುವುದು ದಿನನಿತ್ಯ ಬಳಸುವ, ಪರಿಸರಸ್ನೇಹಿಯಾಗಿರುವ ವಸ್ತುಗಳನ್ನೇ. ಅಡಿಕೆ ಹಾಳೆ, ದರ್ಬೆ ಹುಲ್ಲು, ಗೋಣಿ ಹಗ್ಗ, ಬಿದಿರು, ತೆಂಗಿನ ಚಿಪ್ಪು, ಚಾಪೆ, ಹುಣಸೆ ಬೀಜಗಳನ್ನು ಬಳಸಿಕೊಂಡು ದೊಡ್ಡ ಕಲಾಕೃತಿಗಳನ್ನು ತಯಾರಿಸಿದ್ದಾರೆ.

'ಬಣ್ಣದ ವೇಷ' ಹೆಸರಿನ ಕಲಾಕೃತಿಯು ಏಳು ಅಡಿ ಎತ್ತರ, ಏಳು ಅಡಿ ಅಗಲವಿದ್ದು, ಏಳು ದಿನಗಳ ಅವಧಿಯಲ್ಲಿ ರೂಪಿಸಿದ್ದಾರೆ. ಯಕ್ಷಗಾನದಲ್ಲಿ ಸಾಮಾನ್ಯವಾಗಿ ದೊಡ್ಡ ಕಿರೀಟದ ರಾಕ್ಷಸ ವೇಷಗಳಿಗೆ ಬಣ್ಣದ ವೇಷ ಎನ್ನುವ ರೂಢಿಯಿದೆ. ರಾವಣ, ಬಲಿ, ಶತ್ರು ಪ್ರಸೂದನ ಇತ್ಯಾದಿ ವೇಷಗಳು ಈ ವಿಭಾಗದಲ್ಲಿ ಬರುವಂಥ ವೇಷಗಳು.



ಹಾಸ್ಯಗಾರ 'ಅಜ್ಜೆರ್'

'ಅಜ್ಜೆರ್' ಎಂಬ ಹಾಸ್ಯಗಾರನ ಹಾಗೂ 'ನಮ್ಮೂರ ರಥ' ಎಂಬ ಹೆಸರಿನ ರಥದ ಕಲಾಕೃತಿಯನ್ನೂ ರೂಪಿಸಿದ್ದಾರೆ. ಈಚೆಗೆ ನಡೆದ 'ಕರಚಿತ್ರ' ಪ್ರದರ್ಶನದಲ್ಲಿ ಇವುಗಳನ್ನು ವೀಕ್ಷಣೆಗೆ ಇಟ್ಟಿದ್ದರು. ಹಲವು ಕಾರ್ಯಕ್ರಮಗಳಲ್ಲಿಯೂ ತಮ್ಮ ಈ ಅಪರೂಪದ ಕಲಾಕೃತಿಗಳ ಮೂಲಕ ಗಮನಸೆಳೆದಿದ್ದಾರೆ. ಮಕ್ಕಳಿಗೂ ಕಲಾ ಪ್ರಕಾರಗಳನ್ನು ಹೇಳಿಕೊಡುತ್ತಿದ್ದಾರೆ. ಇಂಥ ಇನ್ನಷ್ಟು, ಮತ್ತಷ್ಟು ಕಲಾಕೃತಿಗಳನ್ನು ಪಡಿಮೂಡಿಸುವ ಹುಮ್ಮಸ್ಸಿನಲ್ಲಿದ್ದಾರೆ.

ಪ್ರತಿಕ್ರಿಯಿಸಿ: feedback@sudha.co.in


ಕಳೆದ 16 ವರ್ಷಗಳಿಂದ ಲಕ್ಷಾಂತರ
ಜನರ ಪ್ರಥಮ ಆಯ್ಕೆ
ಸಂಧಿಲಿನ್
SANDHILIN सन्धिलिन



ಸಂಧಿಲಿನ್ ಹಚ್ಚಿ
ನೋವಿಗೆ
ವಿದಾಯ ಹೇಳಿ!




• ವಿವಿಧ ತರಹದ ನೋವಿಗೆ ಶೀಘ್ರ ಪರಿಣಾಮಕಾರಿ.
• 'ಸಂಧಿಲಿನ್' ಲಿನಿಮೆಂಟ್‌ನ್ನು ಆಯುರ್ವೇದದ ಋಷಿಮುನಿ ಪ್ರಣೀತ ಶಾಸ್ತ್ರೋಕ್ತವಾಗಿ, ಅತ್ಯಾಧುನಿಕ ತಂತ್ರಜ್ಞಾನವನ್ನು ಅಳವಡಿಸಿ ತಯಾರಿಸಲಾಗಿದೆ.
• ಚರ್ಮ ಅಥವಾ ಬಟ್ಟೆಯ ಮೇಲೆ ಯಾವುದೇ ಜಿಡ್ಡು, ಕಲೆಗಳು ಉಂಟಾಗುವುದಿಲ್ಲ.

ತಯಾರಕರು
SDM AYURVEDA PHARMACY
ISO / GMP CERTIFIED
ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇದ ಫಾರ್ಮಸಿ
ಕುತ್ಪಾಡಿ–574 118, ಉಡುಪಿ ಜಿಲ್ಲೆ, ಕರ್ನಾಟಕ
Ph.: 0820 2520852, 89709 77513
https://sdmayupharmacy.com
U.I.N:KA/044/2021